ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 18-01-2001.

# *ಯಥಾರ್ಥ ಸ್ಮೃತಿಯ ಮೂಲಕ ಸಮರ್ಥ ಸ್ವರೂಪವಾಗಿ ಶಕ್ತಿಗಳಿಂದ ಸರ್ವರ ಪಾಲನೆಯನ್ನು ಮಾಡಿರಿ.*

(यथार्थ स्मृति का प्रमाण - समर्थ स्वरूप बन शक्तियों द्वारा सर्व की पालना करो)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಎಲ್ಲರ ಮನಸ್ಸಿನಲ್ಲಿ ಸ್ಮೃತಿ ಬರುತ್ತಿದೆ. ನಾಲ್ಕೂ ಕಡೆಯ ಸರ್ವ ಸ್ನೇಹಿ ಮಕ್ಕಳ ಸ್ನೇಹದ ಮಧುರಾತಿ ಮಧುರ ನೆನಪಿನ ಭಿನ್ನ-ಭಿನ್ನವಾದ ಮಾತು, ಸ್ನೇಹದ ಮುತ್ತುಗಳ ಮಾಲೆಗಳು ಬಾಪ್‌ದಾದಾರವರ ಬಳಿ ಅಮೃತವೇಳೆಗೆ ಮೊದಲೇ ತಲುಪಿತ್ತು. ಅವುಗಳೊಂದಿಗೆ ಸ್ಮೃತಿ ಮತ್ತು ಪ್ರೀತಿಯಿಂದ ಕೂಡಿದ ಮನಸ್ಸಿನ ಹಾಡುಗಳನ್ನು ಸಹ ಕೇಳುತ್ತಿದ್ದಾರೆ. ಅವುಗಳಿಗೆ ಫಲಿತವಾಗಿ ಬಾಪ್‌ದಾದಾರವರಿಬ್ಬರೂ ಮಕ್ಕಳಿಗೆ ಭಿನ್ನಭಿನ್ನ ಶಕ್ತಿಯ ವರದಾನಗಳ ಮಾಲೆಯನ್ನು ಕೊರಳಲ್ಲಿ ಹಾಕುತ್ತಿದ್ದಾರೆ. ಈ ಸ್ಮೃತಿದಿನ ಅರ್ಥಾತ್ ಸಮರ್ಥ ಸ್ವರೂಪದ ವರದಾನದಿಂದ ಸಾಕಾರ ಪ್ರಪಂಚದ ವೇದಿಕೆಯ ಮೇಲೆ ತಂದೆಯನ್ನು ಪ್ರತ್ಯಕ್ಷ ಮಾಡುವ ಮಕ್ಕಳ ವಿಶೇಷ ಸ್ಮೃತಿ ದಿನ. ಏಕೆಂದರೆ ಸಾಕಾರದಲ್ಲಿ ಮಕ್ಕಳನ್ನು ಸೇವೆಗಾಗಿ ನಿಮಿತ್ತ ಮಾಡಿ ಸೇವೆ ಎಂಬ ವೇದಿಕೆಯ ಮೇಲೆ ಸಿಂಹಾಸನಾಧಿಕಾರಿಗಳಾಗಿ ಕುಳ್ಳರಿಸಿ, ಜವಾಬ್ದಾರಿಯ ಕಿರೀಟವನ್ನು ಧರಿಸಿರುವ ದಿನ. ಮಕ್ಕಳೆಲ್ಲರೂ ತಂದೆಗೆ ಸಹಯೋಗಿಯಾಗಿ ನಿಮಿತ್ತವಾಗಿದ್ದಾರೆ ಮತ್ತು ಆಗುತ್ತಾರೆ ಕೂಡಾ! ಮಕ್ಕಳು ಸೇವೆಯಲ್ಲಿ ಉತ್ಸಾಹ ಉಲ್ಲಾಸಗಳಿಂದ ಮುಂದಕ್ಕೆ ಹೋಗುವುದನ್ನು ನೋಡಿ ಬಾಪ್‌ದಾದಾರವರು ಹರ್ಷಿಸುತ್ತಿದ್ದಾರೆ. ಪ್ರತಿಯೊಬ್ಬ ಮಗುವೂ ನಂಬರ್‌ವಾರ್ ಆಗಿ ಧೈರ್ಯ ಮತ್ತು ಉಲ್ಲಾಸದಿಂದ

ಮುಂದಕ್ಕೆ ಹೋಗುತ್ತಿದ್ದಾರೆ ಹೆಚ್ಚು ಜನ ಮಕ್ಕಳು ಸ್ಮೃತಿ ಮತ್ತು ಸೇವೆಯಲ್ಲಿ ಮಗ್ನವಾಗಿರುತ್ತಾರೆ. ಇಂದು ನಾಲ್ಕೂ ಕಡೆ ಇರುವ ಮಕ್ಕಳೆಲ್ಲರೂ ಯಾವ ರೀತಿಯಾದರೆ ವಿಶೇಷವಾಗಿ ಬ್ರಹ್ಮಾ ತಂದೆಯ ಪ್ರೀತಿಯಲ್ಲಿ ಲೀನವಾಗಿದ್ದರೋ ಹಾಗೆಯೇ ಬ್ರಹ್ಮಾ ತಂದೆಯು ಸಹ ಮಕ್ಕಳ ಪ್ರೀತಿಯಲ್ಲಿ ಲೀನವಾಗಿ ಇದ್ದಾರೆ.

ಇಂದು ಬ್ರಹ್ಮಾತಂದೆ ಮಕ್ಕಳ ವಿಶೇಷತೆಗಳನ್ನು ನೋಡುತ್ತಿದ್ದಾರೆ. ಪ್ರತಿಯೊಂದು ಮಗುವಿನ ವಿಶೇಷತೆಗಳನ್ನು ಎದುರಿಗಿಟ್ಟು ನೋಡುತ್ತಿದ್ದರೆ ಬ್ರಹ್ಮ ಬಾಬಾರವರ ಬಾಯಿಂದ ವಾಹ್ ಮಕ್ಕಳೇ ವಾಹ್!ಶಭಾಷ್ ಮಕ್ಕಳೇ ಶಭಾಷ್! ಎಂಬ ಮಾತುಗಳು ಬರುತ್ತಿವೆ. ಇನ್ನು ಏನಾಯಿತು? ಬ್ರಹ್ಮಾ ತಂದೆ ವಾಹ್ ಮಕ್ಕಳೇ ವಾಹ್! ಶಭಾಷ್ ಮಕ್ಕಳೇ ಎಂದು ಹೇಳುತ್ತಿದ್ದ ಹಾಗೆಯೇ ಮಕ್ಕಳೆಲ್ಲರ ನಯನಗಳಿಂದ ಪ್ರೀತಿಯ ಗಂಗಾ, ಯಮುನಗಳು ಪ್ರವಹಿಸುತ್ತಿದ್ದವು. ಪ್ರತಿಯೊಂದು ಮಗು ಪ್ರೀತಿ ಎಂಬ ನದಿಯಲ್ಲಿ ಲವಲೀನವಾಗಿ ಇದ್ದಾರೆ. ಇದು ವತನದ ದೃಶ್ಯ. ಹಾಗೆಯೇ ಸಾಕಾರ ಪ್ರಪಂಚದಲ್ಲಿಯೂ ಸಹ ಪ್ರತಿಯೊಂದು ಸ್ಥಾನದ ಸ್ಮೃತಿ ಮತ್ತು ಸ್ನೇಹದ ದೃಶ್ಯಗಳನ್ನು ಬಾಪ್‌ದಾದಾ ನೋಡಿದರು. ಇನ್ನು ಮುಂದೆ ಏನು ಮಾಡಬೇಕು? ಸ್ಮೃತಿಯಂತೂ ಇರುತ್ತದೆ ಆದರೆ ಸ್ಮೃತಿಯಿಂದ ಸಮರ್ಥರಾಗುವುದೇ ಯಥಾರ್ತ ಸ್ಮೃತಿಯ ಪ್ರಮಾಣವಾಗಿದೆ. ಸ್ಮೃತಿ ಎಂಬುವುದು ಅತಿ ಶ್ರೇಷ್ಠವಾದದ್ದು. ಬ್ರಾಹ್ಮಣರಾದ ನಂತರ ಯಾವುದಾದರೆ ಬಾಪ್‌ದಾದಾರವರಿಂದ ಜನ್ಮಸಿದ್ಧ ಅಧಿಕಾರವಾಗಿ ಲಭಿಸಿದೆಯೋ ಅದು ಒಂದು ಕ್ಷಣದ ಸ್ಮೃತಿಯಿಂದಲೇ ಲಭಿಸಿದೆ. ಸ್ಮೃತಿಯಿಂದಲೇ ಅಧಿಕಾರವನ್ನು ಪಡೆದಿದ್ದೀರಿ. ಈ ಸ್ಮೃತಿ ಸರ್ವಶಕ್ತಿಗಳಿಗೆ ಕೀಲಿ ಕೈಯಾಗಿದೆ. ಇದು ಬಂಗಾರದ ಕೀಲಿ ಕೈ. ತಂದೆಗೆ ಮಕ್ಕಳಾಗಿದ್ದೀರಿ ಅರ್ಥಾತ್ ನಾನು ಆತ್ಮ ಎಂಬ ಸ್ಮೃತಿ ಬಂದಿದೆ. ನಾನು ಆತ್ಮ, ತಂದೆಯ ಸಂತಾನ ಎಂದು ಎಷ್ಟು ಸಮಯದಲ್ಲಿ ನಿಶ್ಚಯವಾಗಿದೆ? ನಿಶ್ಚಯವಾಗಲು ಸಮಯ ಹಿಡಿಸಬಹುದು, ಆದರೆ ಎಷ್ಟು ಸಮಯದಲ್ಲಿ ನಿಶ್ಚಯವಾಗಿದೆ? ಕ್ಷಣದಲ್ಲಿ ವ್ಯಾಪಾರವಾಗಿ ಬಿಟ್ಟಿದೆಯಲ್ಲವೇ, ಕ್ಷಣದಲ್ಲಿ ವಾರಸತ್ವಕ್ಕೆ ಅಧಿಕಾರಿಗಳಾಗಿ ಬಿಟ್ಟಿದ್ದೀರಿ. ಅಧಿಕಾರಿಯಂತೂ ಎಲ್ಲರೂ ಆಗಿದ್ದೀರಿ. ಆಗಿದ್ದೀರಲ್ಲವೇ? ಎಲ್ಲರೂ ಆಗಿಬಿಟ್ಟಿದ್ದೀರಾ ಅಥವಾ ಇನ್ನೂ ಆಗುತ್ತಿದ್ದೀರಾ? ಅಧಿಕಾರಿಯಾಗಿಬಿಟ್ಟಿದ್ದೀರಾ, ಇದು ಪಕ್ಕಾ ಆಗಿದೆಯೇ? ಒಳ್ಳೆಯದು. ಡಬಲ್ ವಿದೇಶಿಯರು ಅಧಿಕಾರಿಯಾಗಿ ಬಿಟ್ಟಿದ್ದೀರಾ, ಪಾಂಡವರು ಅಧಿಕಾರಿಯಾಗಿ ಬಿಟ್ಟಿದ್ದೀರಲ್ಲವೇ, ಪಕ್ಕಾ ಆಗಿದೆಯಾ? ಹಾಗಿದ್ದರೆ ಬಹಳ ಒಳ್ಳೆಯದು. ಸರ್ವಶಕ್ತಿಗಳನ್ನು ವಿಶೇಷವಾಗಿ ತಂದೆಯಿಂದ ವಾರಸತ್ವವಾಗಿ ಪ್ರಾಪ್ತಿ ಮಾಡಿಕೊಂಡಿದ್ದೀರಿ. ಪ್ರಾಪ್ತಿ ಮಾಡಿಕೊಂಡಿರುವವರು ಕೈಯನ್ನೆತ್ತಿರಿ. ನೀವು ಸರ್ವಶಕ್ತಿಗಳನ್ನು ಪಡೆದಿದ್ದೀರಾ ಅಥವಾ ಕೆಲವರು ಎಂಟು ಶಕ್ತಿಗಳು ಕೆಲವರು ಆರು ಶಕ್ತಿಗಳನ್ನು ಪಡೆದಿದ್ದೀರಾ? ನಿಮ್ಮನ್ನು ನೀವು ಮಾಸ್ಟರ್ ಸರ್ವಶಕ್ತಿವಂತರಾಗಿ ಕರೆಯಿಸಿಕೊಳ್ಳುತ್ತಿದ್ದೀರಲ್ಲವೇ? ಶಕ್ತಿವಂತರು ಎಂದಲ್ಲ. ಸರ್ವಶಕ್ತಿವಂತರು ಎಂದು ಕರೆಸಿಕೊಳ್ಳುತ್ತಿದಿರಿ. ಸರ್ವ ಎಂಬ ವಿಷಯದ ಬಗ್ಗೆ ಬಾಪ್‌ದಾದಾ ಕೇಳುತ್ತಿದ್ದಾರೆ. ನಿಮ್ಮೆಲ್ಲರಿಗೂ ಸರ್ವಶಕ್ತಿಗಳು ಇವೆಯಾ ಅಥವಾ ಸ್ವಲ್ಪ ಜನಕ್ಕೆ ಸ್ವಲ್ಪ ಶಕ್ತಿಗಳು ಮಾತ್ರವೇ ಇವೆಯೇ? ಯಾರು ಇಲ್ಲವೇ, ಯಾರೂ ಕೈಯನ್ನು ಎತ್ತುತ್ತಿಲ್ಲ ಅರ್ಥಾತ್ ನೀವೆಲ್ಲರೂ ಮಾಸ್ಟರ್ ಸರ್ವಶಕ್ತಿವಂತರಲ್ಲವೇ, ಒಳ್ಳೆಯದು. ಬಾಪ್‌ದಾದಾ ಕೇಳುತ್ತಿದ್ದಾರೆ ಓ ಮಾಸ್ಟರ್ ಸರ್ವಶಕ್ತಿವಂತರೇ! ಪ್ರಕೃತಿ, ಮಾಯೆ, ಸ್ವಭಾವ ಸಂಸ್ಕಾರಗಳು ಮತ್ತು ವಾಯುಮಂಡಲದಿಂದ ಬರುವ ಪ್ರತಿಯೊಂದು ಪರಿಸ್ಥಿತಿಯನ್ನು ಸರ್ವ ಶಕ್ತಿಗಳಿಂದ ಎದುರಿಸಲಾಗುತ್ತಿದೆಯೇ? ಪ್ರಕೃತಿ, ಮಾಯೆ, ಸಂಸ್ಕಾರಗಳು ವಾಯುಮಂಡಲ ಮತ್ತು ಸಾಂಗತ್ಯ ದೋಷ ಈ ಐದು ನಿಮ್ಮ ಶಕ್ತಿಗೆ ಅಧೀನವಾಗುತ್ತಿವೆಯೇ? ಮಾಡಿಕೊಳ್ಳುತ್ತಿದ್ದೀರಾ? ಇದು ಐದು ಮುಖಗಳ ಸರ್ಪ. ಈ ಐದು ಮುಖಗಳ ಮೇಲೆ ಅಧಿಕಾರಿಯಾಗಿ ನಾಟ್ಯವನ್ನು ಮಾಡುತ್ತಿದ್ದೀರಾ,

ಮಾಡುತ್ತಿದ್ದೀರಾ ಅಥವಾ ಸರ್ಪ ನಿಮ್ಮ ತಲೆಯ ಮೇಲೆ ಹತ್ತಿ ನೃತ್ಯ ಮಾಡುತ್ತಿದೆಯೇ? ಸರ್ಪವು ಸಹ ಬಹಳ ಚೆನ್ನಾಗಿ ನೃತ್ಯ ಮಾಡುತ್ತದೆಯಲ್ಲವೇ? ಹಾಗೆಯೇ ಒಂದು ಮುಖ ನಿಮಗೆ ನೃತ್ಯವನ್ನು ತೋರಿಸುತ್ತಿಲ್ಲ ತಾನೇ! ಯಾವಾಗಲಾದರೂ ಆ ನೃತ್ಯ ನೋಡಬೇಕೆಂದುಕೊಳ್ಳುತ್ತಿಲ್ಲ ತಾನೇ! ಈ ಐದು ಸರ್ಪಗಳನ್ನು ಕೊರಳಲ್ಲಿ ಹಾರವಾಗಿ ಹಾಕಿಕೊಳ್ಳುತ್ತಿದ್ದೀರಾ? ಶಯನ ಶೆಯ್ಯೆಯಾಗಿ(ಮಲಗುವ ಹಾಸಿಗೆ) ಮಾಡಿಕೊಳ್ಳುತ್ತಿದ್ದೀರಾ? ನಿಮ್ಮ ಅಂತಿಮ ಮಹಾದೇವ, ತಪಸ್ವೀ ದೇವ, ಅಶರೀರಿ ಸ್ಥಿತಿ ಇರುವ ದೇವಾತ್ಮನಿಗೆ ಫರಿಶ್ತಾ ಆತ್ಮನಿಗೆ ಸ್ಮೃತಿ ಚಿಹ್ನೆಯಲ್ಲಿ ಈ ಸರ್ಪಗಳನ್ನು ಕಂಠಹಾರವಾಗಿ ತೋರಿಸಿದ್ದಾರೆ. ಯಾವಾಗ ಈ ಮಾಲೆಯನ್ನು ಧರಿಸುತ್ತೀರೋ ಆಗ ತಂದೆಯ ಮಾಲೆಯಲ್ಲಿ ಒಳ್ಳೆಯ ನಂಬರ್ ನಲ್ಲಿ ಸಮೀಪ  ಮಣಿಯಾಗುತ್ತೀರಿ. ವಿಜಯೀ ಮಾಲೆಯ ಸಮೀಪದ ಮಣಿಯಾಗುತ್ತೀರಿ.

ಬಾಪ್‌ದಾದಾ ಇಷ್ಟಕ್ಕೂ ಮುಂಚೆ ಸಹ ತಿಳಿಸಿದ್ದಾರೆ. ವರ್ತಮಾನ ಸಮಯದನುಸಾರ ವಿಶೇಷವಾಗಿ ಸಹನೆಶಕ್ತಿ ಮತ್ತು ಪರಿಸ್ಥಿತಿಗಳನ್ನು ಎದುರಿಸುವ ಶಕ್ತಿ ಕರ್ಮದಲ್ಲಿ ಬಹಳಷ್ಟು ಅವಶ್ಯಕವಾಗಿದೆ. ಮನಸ್ಸು ಅಥವಾ ವಾಣಿಯವರೆಗೆ ಮಾತ್ರವಲ್ಲ ಕರ್ಮದಲ್ಲಿಯೂ ಸಹ ಅವಶ್ಯಕವಾಗಿದೆ. ಫಲಿತಾಂಶವನ್ನು ನೋಡಿದರೆ ಮಕ್ಕಳ ಹತ್ತಿರ ಶಕ್ತಿಗಳಿವೆ. ಆದರೆ ವ್ಯತ್ಯಾಸವೇನಿದೆ? ಯಾವ ಸಮಯಕ್ಕೆ, ಯಾವ ಶಕ್ತಿಯನ್ನು, ಯಾವ ವಿಧಿಯಿಂದ ಕಾರ್ಯದಲ್ಲಿ ಉಪಯೋಗಿಸಬೇಕೋ ಆ ಸಮಯಕ್ಕೆ ಆ ಶಕ್ತಿಯನ್ನು ವಿಧಿಪೂರ್ವಕವಾಗಿ ಉಪಯೋಗಿಸುವುದರಲ್ಲಿ ಅಥವಾ ಕಾರ್ಯದಲ್ಲಿ ತರುವುದರಲ್ಲಿ ವ್ಯತ್ಯಾಸ ಬರುತ್ತಿದೆ. ಸ್ಮೃತಿ ಇರುತ್ತದೆ ಆದರೆ ಸ್ಮೃತಿಯನ್ನು ಸಮರ್ಥ ರೂಪದಲ್ಲಿ ತರಲಾಗುತ್ತಿಲ್ಲ. ಸ್ಮೃತಿ ಚೆನ್ನಾಗಿದೆ ಆದರೆ ಸಮರ್ಥತೆ ಆಗಾಗ ಕಡಿಮೆ ಮತ್ತು ಆಗಾಗ ಚೆನ್ನಾಗಿರುತ್ತಿದೆ. ಸ್ಮೃತಿಯು ವಾರಸತ್ವಕ್ಕೆ ಅಧಿಕಾರಿಯನ್ನಾಗಿ ಮಾಡಿದೆ ಆದರೆ ಈ ಸ್ಮೃತಿಯ ಸಮರ್ಥತೆ ವಿಜಯಿಯಾಗಿ ಮಾಡಿ ವಿಜಯೀ ಮಾಲೆಯ ಮಣಿಯಯನ್ನಾಗಿ ಮಾಡುತ್ತದೆ.  ಸಮರ್ಥತೆಯನ್ನು ಸ್ವರೂಪದಲ್ಲಿ ತನ್ನಿರಿ. ಮನಸ್ಸಿನಲ್ಲಿ ಇದೆ, ಬುದ್ಧಿಯಲ್ಲಿ ಇದೆ ಆದರೆ ನಿಮ್ಮ ಸ್ವರೂಪದಲ್ಲಿ ಪ್ರತಿಯೊಂದು ಕಾರ್ಯದಲ್ಲಿ ಪ್ರತಿಯೊಂದು ಶಕ್ತಿಯು ಪ್ರತ್ಯಕ್ಷ ರೂಪದಲ್ಲಿ ಬರಬೇಕು. ಆದ್ದರಿಂದ ಸ್ಮೃತಿ ದಿನೋತ್ಸವವನ್ನಂತೂ ಬಹಳ ಚೆನ್ನಾಗಿ ಆಚರಿಸಿಕೊಂಡಿದ್ದೀರಿ ಆದರೆ ಈಗ ಸಮರ್ಥತೆಯನ್ನು ಅರ್ಥಾತ್ ಶಕ್ತಿಗಳನ್ನು ಸ್ವರೂಪದಲ್ಲಿ ತನ್ನಿರಿ. ಒಂದು ವೇಳೆ ಯಾರಾದರೂ ನಿಮ್ಮನ್ನು ನೋಡಿದರೂ ನಿಮ್ಮ ನಯನಗಳಿಂದ ಸಮರ್ಥತೆಯ ಅನುಭವವಾಗಬೇಕು.  ಪ್ರತಿಯೊಂದು ಮಾತಿನಿಂದ ಇತರರು ಸಹ ಸಮರ್ಥವಾಗಿ ಬಿಡಬೇಕು.  ಸಮರ್ಥತೆಯ ಅನುಭವ ಮಾಡಿಕೊಳ್ಳಬೇಕು. ಸಾಧಾರಣ ಮಾತುಗಳು ಇರಬಾರದು ಪ್ರತಿಯೊಂದು ಮಾತಿನಲ್ಲಿ ಲಭಿಸಿರುವ ಸಮರ್ಥತೆಯ ವರದಾನವನ್ನು ಅನುಭವ ಮಾಡಿಸಿರಿ. ಮನಸ್ಸು ಬುದ್ದಿಯಿಂದ ಶ್ರೇಷ್ಠ ಸಂಕಲ್ಪ ಮತ್ತು ಯಥಾರ್ಥ ನಿರ್ಣಯ, ಶಕ್ತಿಯ ವಾಯುಮಂಡಲವನ್ನು ಸ್ವರೂಪದಲ್ಲಿ ತನ್ನಿರಿ. ಸಾಧಾರಣ ನಡವಳಿಕೆಯಲ್ಲಿಯೂ ಸಹ ಫರಿಶ್ತಾ ಸ್ಥಿತಿಯ ಸಮರ್ಥತೆ ಇರಬೇಕು. ಸ್ವಯಂಗಾಗಿ ಮತ್ತು ಇತರರಿಗಾಗಿಯೂ ಡಬಲ್ ಲೈಟ್ನ ಅನುಭವವಾಗಬೇಕು.  ಹೀಗಿದ್ದಿರಾ? ಆದ್ದರಿಂದ ನಡೆದಾಡುತ್ತಾ, ಅಡ್ಡಾಡುತ್ತಾ ಸಮರ್ಥ ಸ್ವರೂಪರಾಗಿರಿ.  ಮತ್ತು ಇತರರಿಗೆ ಸಮರ್ಥತೆಯನ್ನು ಕೊಡಿಸಿರಿ.

ಬಾಪ್‌ದಾದಾ ಇಂದು ಬ್ರಹ್ಮಾ ತಂದೆಯನ್ನು ಒಂದು ವಿಹಾರ ಮಾಡಿಸಿದರು (ಬಾಪ್‌ದಾದಾರವರಿಬ್ಬರೂ ಜೊತೆ ಜೊತೆಯೇ ಇದ್ದರು) ಯಾವ ವಿಹಾರ ಮಾಡಿಸಿದರು. ಬ್ರಹ್ಮಾ ತಂದೆ ಅವ್ಯಕ್ತವಾದ ನಂತರ ದೇಶವಿದೇಶಗಳಲ್ಲಿ ಅವ್ಯಕ್ತ ಜನ್ಮ ಪಡೆದಿರುವಂತಹ ಬ್ರಾಹ್ಮಣರನ್ನು ತೋರಿಸಿದರು. ಅವರು ಎಷ್ಟು ಜನ ಇರುತ್ತಾರೆ. ಸಾಕಾರ

ರೂಪಕ್ಕಿಂತಲೂ ಅವ್ಯಕ್ತ ರೂಪದ ರಚನೆ ಬಹಳ ದೊಡ್ಡದು ಪ್ರತಿಯೊಂದು ಸ್ಥಾನದಲ್ಲಿರುವ ಅವ್ಯಕ್ತ ರಚನೆಯ ಆತ್ಮರನ್ನು ತಂದೆಯು ಪ್ರತ್ಯಕ್ಷ ಮಾಡಿದ್ದಾರೆ. ಅದರಲ್ಲಿ ನೀವು ಸಹ ಇದ್ದೀರಲ್ಲವೇ? ಮತ್ತು ಪ್ರತಿಯೊಬ್ಬರಿಗೂ ಬ್ರಹ್ಮಾ ತಂದೆ ಬಹಳ ಸ್ನೇಹದ ಸಮೀಪ ದೃಷ್ಟಿಯನ್ನು ಕೊಟ್ಟರು ಮತ್ತು ಅವ್ಯಕ್ತ ರಚನೆಗೆ ಒಂದು ವಿಶೇಷ ಬಹುಮಾನವನ್ನು ಸಹ ಕೊಟ್ಟರು. ಈಗ ಇಲ್ಲಿ ಕುಳಿತಿರುವವರಲ್ಲಿ ಸಾಕಾರ ಬ್ರಹ್ಮನ ನಂತರ ಯಾರಾದರೇ ಬ್ರಾಹ್ಮಣಾತ್ಮರ ರಚನೆಯಲ್ಲಿ ಬಂದಿದ್ದೀರೋ ಅವರು ಕೈಯನ್ನೆತ್ತಿರಿ. ಬಹಳಷ್ಟು ಜನರಿದ್ದೀರಿ, ಒಳ್ಳೆಯದು. ಕೈಯನ್ನು ಇಳಿಸಿಬಿಡಿ. ಯಾರಾದರೆ ಸಾಕಾರ ರೂಪದ(ಬ್ರಹ್ಮ ತಂದೆ ಇದ್ದಾಗ) ರಚನೆಯಲ್ಲಿದ್ದಿರೋ ಅವರು ಕೈಯನ್ನೆತ್ತಿರಿ. ಬಹಳ ಸ್ವಲ್ಪ ಜನರಿದ್ದಾರೆ. ಇಲ್ಲಿ ಎಲ್ಲರೂ ಕುಳಿತುಕೊಳ್ಳಲಾಗುವುದಿಲ್ಲ ಆದರೆ ವತನದಲ್ಲಂತೂ ಎಲ್ಲರೂ ಬರುತ್ತಾರೆ. ಅಲ್ಲಿ ಎಷ್ಟು ದೊಡ್ಡ ಸ್ಥಾನ ಬೇಕೆಂದರೆ ಅಷ್ಟು ದೊಡ್ಡ ಸ್ಥಾನವಿರುತ್ತದೆ. ಆದ್ದರಿಂದ ಬಾಪ್‌ದಾದಾ ಎಲ್ಲರನ್ನು ವತನದಲ್ಲಿ ಪ್ರತ್ಯಕ್ಷ ಮಾಡಿದರು ಮತ್ತು ಆಹ್ವಾನವನ್ನು ಕೊಟ್ಟು ಕರೆದರು. ಎಲ್ಲರೂ ಬಹಳ ಖುಷಿಪಡುತ್ತಿದ್ದಾರೆ. ಮತ್ತು ಅವರಿಗಿಂತ ಜಾಸ್ತಿ ಬಾಪ್‌ದಾದಾ ಖುಷಿ ಪಡುತ್ತಿದ್ದಾರೆ. ಅಂತಹ ರತ್ನಗಳಿಗೆ ಬಾಪ್‌ದಾದಾ ಬಹುಮಾನವನ್ನು ಕೊಟ್ಟರು. ಬಹಳ ಸುಂದರವಾದ ಕಲೆ ಇಲ್ಲದ ವಜ್ರದ ಕಮಲ ಪುಷ್ಪವನ್ನು ಕೊಟ್ಟರು. ಬಹಳಷ್ಟು ಹೊಳೆಯುತ್ತಾ ಇತ್ತು ಮತ್ತು ಒಂದೊಂದು ಕಮಲದ ಎಲೆಗಳಲ್ಲಿ ವಿಧವಿಧವಾದ ಶಕ್ತಿಗಳಿದ್ದವು. ವಿಧವಿಧವಾದ ಬಣ್ಣಗಳಿಂದ ಹೊಳೆಯುತ್ತಾ ಇದೆ. ಆ ವಿಧವಾದ ಕಲೆ ಇಲ್ಲದ ವಜ್ರದ ಕಮಲ ಪುಷ್ಪವನ್ನು ನಿಮ್ಮ ಎದುರಿಗಡೆ ಪ್ರತ್ಯಕ್ಷ ಮಾಡಿಕೊಳ್ಳಿರಿ. ಎಷ್ಟು ಶೋಭನೀಯವಾಗಿ ಇರುತ್ತದೆ! ಪ್ರತ್ಯಕ್ಷವಾಗಿದೆಯೇ, ಡಬಲ್ ವಿದೇಶಿಯರು ಪ್ರತ್ಯಕ್ಷ ಮಾಡಿಕೊಂಡಿದ್ದೀರಾ? ಟೀಚರ್ಸ್ ಪ್ರತ್ಯಕ್ಷ ಮಾಡಿಕೊಂಡಿದ್ದೀರಾ? ಪಾಂಡವರು ಪ್ರತ್ಯಕ್ಷ ಮಾಡಿಕೊಂಡಿದ್ದೀರಾ? ಮತ್ತು ಮಧುರಾತಿ ಮಧುರವಾದ ಮಾತೆಯರ ಸಲುವಾಗಿ ಶುಭಾಶಯಗಳು. ಅಧಿಕಾರದಿಂದ ವಿಶೇಷವಾಗಿ ತಂದೆಯಿಂದ ಸರ್ವಶಕ್ತಿಗಳು ಲಭಿಸಿವೆ. ಲಭಿಸಿವೆ ಎಂಬುವವರು ಕೈಯನ್ನು ಎತ್ತಿರಿ. ಸರ್ವಶಕ್ತಿಗಳು ಲಭಿಸಿವೆ ತಾನೆ! ಅಥವಾ ಕೆಲವರಿಗೆ ಏಳು ಶಕ್ತಿಗಳು ಕೆಲವರಿಗೆ ಆರು ಶಕ್ತಿಗಳು ಹೀಗೆ ಲಭಿಸಿವಿಯೇ? ನಿಮ್ಮನ್ನು ನೀವು ಮಾಸ್ಟರ್ ಸರ್ವಶಕ್ತಿವಂತರು ಎಂದು ಕರೆದುಕೊಳ್ಳುತ್ತಿದ್ದೀರಲ್ಲವೇ? ಶಕ್ತಿವಂತರು ಎನ್ನುತ್ತಿಲ್ಲ. ಸರ್ವಶಕ್ತಿವಂತರು ಎನ್ನುತ್ತಿದ್ದೀರಿ. ಮುಂದೆ ಕುಳಿತಿರುವವರು ಸರ್ವಶಕ್ತಿವಂತರೇನಾ? ಬಾಪ್‌ದಾದಾ ಸರ್ವ ಎಂಬ ಮಾತಿನ ಬಗ್ಗೆ ಕೇಳುತ್ತಿದ್ದಾರೆ? ಎಲ್ಲರೂ ಸರ್ವ ಶಕ್ತಿವಂತರೇನಾ ಅಥವಾ ಸ್ವಲ್ಪ ಜನ ಶಕ್ತಿವಂತರೇ? ಹಾಗೆ ಯಾರಾದರೂ ಇದ್ದೀರಾ? ಯಾರು ಇಲ್ಲವೇ? ನಾನು ಸರ್ವಶಕ್ತಿವಂತನಲ್ಲ, ಶಕ್ತಿವಂತನು ಎಂಬುವವರು ಯಾರಾದರೂ ಇದ್ದೀರಾ? ಇಲ್ಲವೇ? ಯಾರು ಕೈಗಳನ್ನು ಎತ್ತುತ್ತಿಲ್ಲ. ಹಾಗಾದರೆ ಎಲ್ಲರೂ ಮಾಸ್ಟರ್ ಸರ್ವಶಕ್ತಿವಂತರು. ಒಳ್ಳೆಯದು. ಹಾಗಾದರೆ ಬಾಪ್‌ದಾದಾ ಕೇಳುತ್ತಿದ್ದಾರೆ ಸರ್ವಶಕ್ತಿವಂತರು ಪ್ರಕೃತಿಯ, ಮಾಯೆಯ, ಸ್ವಭಾವ ಸಂಸ್ಕಾರಗಳ, ವಾಯುಮಂಡಲದ ಪರಿಸ್ಥಿತಿಗಳಲ್ಲಿ ಸರ್ವಶಕ್ತಿವಂತರಾಗಿದ್ದಿರಾ? ಪ್ರಕೃತಿ, ಮಾಯೆ, ಸಂಸ್ಕಾರಗಳು, ವಾಯುಮಂಡಲವನ್ನು ಪ್ರತ್ಯಕ್ಷ ಮಾಡಿಕೊಂಡಿದ್ದೀರಾ? ಮಾತೆಯರು ಈ ವಿಶ್ವವಿದ್ಯಾಲಯದ ವಿಶೇಷ ಆತ್ಮರು. ಎಲ್ಲರಿಗೂ ಯಾವ ವಿಷಯದಲ್ಲಿ ಆಶ್ಚರ್ಯವೆನಿಸುತ್ತದೆ? ಇಷ್ಟು ಜನ ಮಾತೆಯರು ಶಕ್ತಿಯರಾಗಿದ್ದಾರೆ. ಇಷ್ಟು ಜನ ಮಾತೆಯರು ಪವಿತ್ರತೆಯ ವ್ರತವನ್ನು ಧಾರಣೆ ಮಾಡಿ ದೇವಿಯರ ರೂಪದಲ್ಲಿ ಪರಿವರ್ತನೆಯಾಗಿದ್ದಾರೆ. ಹೆಚ್ಚಾಗಿ ಮಾತೆಯರೇ ಕಾಣಿಸುತ್ತಿದ್ದಾರೆ. ಆದ್ದರಿಂದ ಬಾಪ್‌ದಾದಾ ಇಂದು ವಿಶೇಷವಾಗಿ ಅವ್ಯಕ್ತ ರಚನೆಗೆ ಬಹಳ ಬಹಳ ಪ್ರೀತಿಯನ್ನು ಕೊಟ್ಟರು ಮತ್ತು ವತನದಲ್ಲಿ ಹೂದೋಟವನ್ನು ಸಹ ಪ್ರತ್ಯಕ್ಷ ಮಾಡಿದರು, ಪರ್ವತವನ್ನು ಸಹ ಪ್ರತ್ಯಕ್ಷ ಮಾಡಿದರು, ಜೊತೆಜೊತೆಗೆ ಸಾಗರವನ್ನು ಸಹ ಪ್ರತ್ಯಕ್ಷ ಮಾಡಿದರು. ಮತ್ತು ಬಹಳ ಹೆಚ್ಚಾಗಿ ವಿಹಾರ ಮಾಡಿಸಿದರು, ಆ ಸಮಯದಲ್ಲಿ ಬಾಬಾ ತಿರುಗಾಡಲು ಫ್ರೀ

ಕೊಟ್ಟರು.  ಬಾಲ್, ಬ್ಯಾಟ್ ನೊಂದಿಗೆ ಆಡಿಸಲಿಲ್ಲ. ಆದರೆ ಚೆನ್ನಾಗಿ ತಿರುಗಾಡಿಸಿದರು, ಸ್ವಲ್ಪ ಜನ ಸ್ನೇಹ ಮತ್ತು ಅಲೆಗಳಲ್ಲಿ ತೇಲಾಡುತ್ತಿದ್ದಾರೆ. ಸ್ವಲ್ಪ ಜನ ಪರ್ವತದ ಮೇಲೆ ಕುಳಿತುಕೊಂಡಿದ್ದಾರೆ, ಸ್ವಲ್ಪ ಜನ ತೋಟದಲ್ಲಿ ತಿರುಗಾಡುತ್ತಿದ್ದಾರೆ. ಹೀಗೆ ಬಾಬಾ ಇಂದು ಅವ್ಯಕ್ತ ರಚನೆಯ ಸಭೆಯನ್ನು ಪ್ರತ್ಯಕ್ಷ ಮಾಡಿದರು.  ಮಕ್ಕಳೆಲ್ಲರಿಗೂ ಸದಾ ಸರ್ವ ಶಕ್ತಿಗಳಿಂದ ಜೀವಿಸುತ್ತಾ ಇರಿ, ಹಾರುತ್ತ ಇರಿ ಎಂದು ಇದೇ ವರದಾನವನ್ನು ಕೊಟ್ಟರು.

ಈ ಸ್ಮೃತಿ ದಿನದಂದು ಬಾಪ್‌ದಾದಾರವರ ವಿಶೇಷ ಮಂತ್ರವೇನೆಂದರೆ ಸ್ಮೃತಿ ಸ್ವರೂಪರಾಗಿ ಸಮರ್ಥತೆಯನ್ನು ಸ್ವರೂಪದಲ್ಲಿ ತನ್ನಿರಿ.  ಖಜಾನೆಗಳನ್ನು ಗುಪ್ತವಾಗಿರಿಸಬೇಡಿರಿ ಪ್ರತಿಯೊಂದು ಕರ್ಮದಿಂದ ಪ್ರತ್ಯಕ್ಷ ಮಾಡಿರಿ. ಯಾವ ಆತ್ಮ ಬೇಕಾದರೂ ದೃಷ್ಟಿಯಿಂದಾದರೂ, ಮಾತಿನಿಂದಾದರೂ, ಕರ್ಮದಲ್ಲಿ, ಸಂಬಂಧ ಸಂಪರ್ಕದಲ್ಲಾದರೂ ಅವರಿಗೆ ಸಮರ್ಥವಾಗುವ ಸಹಯೋಗವನ್ನು ಕೊಡಿ. ಸಮರ್ಥ ಸ್ವರೂಪದ ಸ್ನೇಹವನ್ನು ಕೊಡಿ. ಬಾಪ್‌ದಾದಾ ಇದು ಸಹ ನೋಡುತ್ತಿದ್ದಾರೆ, ಯಾರಾದರೆ ಹೊಸ ಹೊಸ ಮಕ್ಕಳು ಬರುತ್ತಿದ್ದಾರೆಯೋ ಅವರಲ್ಲಿ ಸ್ವಲ್ಪ ಜನ ಯಾವ ವಿಧವಾಗಿ ಇದ್ದಾರೆ ಎಂದರೆ ಅವರಿಗೆ ಬಾಪ್‌ದಾದಾರವರ ಸಹಯೋಗ ಜೊತೆ ಜೊತೆಯೇ ಬ್ರಾಹ್ಮಣಾತ್ಮರಿಂದ ಧೈರ್ಯ ಮತ್ತು ಉತ್ಸಾಹ ಉಲ್ಲಾಸಗಳ ಸಮಾಧಾನ ಲಭಿಸುವ ಅವಶ್ಯಕತೆ ಇದೆ.  ಚಿಕ್ಕ ಚಿಕ್ಕವರಲ್ಲವೇ, ಚಿಕ್ಕವರಾದರೂ ಧೈರ್ಯವಿಟ್ಟುಕೊಂಡು ಬ್ರಾಹ್ಮಣರಂತೂ ಆಗಿದ್ದಾರಲ್ಲವೇ! ಆದ್ದರಿಂದ ಚಿಕ್ಕವರಿಗೆ ಶಕ್ತಿಗಳಿಂದ ಪಾಲನೆ ಮಾಡುವ ಅವಶ್ಯಕತೆ ಇದೆ.  ಇತರ ಪಾಲನೆಯಲ್ಲ ಈಗ ಶಕ್ತಿಯನ್ನು ಕೊಡುವ ಪಾಲನೆ ಅವಶ್ಯಕವಾಗಿದೆ.  ಬೇಗಬೇಗ ಸ್ಥಾಪನೆಗೆ ಅವಶ್ಯಕವಾಗಿರುವ ಬ್ರಾಹ್ಮಣಾತ್ಮರು ತಯಾರಾಗಿ ಬಿಡಬೇಕು.  ಏಕೆಂದರೆ ಕಡಿಮೆಯಲ್ಲಿ ಕಡಿಮೆ 9 ಲಕ್ಷ ಜನರಂತು ಬೇಕು ತಾನೆ! ಆದ್ದರಿಂದ ಶಕ್ತಿಗಳ ಸಹಯೋಗವನ್ನು ಕೊಡಿ. ಶಕ್ತಿಗಳಿಂದ ಪಾಲನೆಯನ್ನು ಕೊಡಿ. ಶಕ್ತಿಗಳನ್ನು ಹೆಚ್ಚಿಸಿರಿ ಹೆಚ್ಚು ವಾದನೆಗಳು ಮಾಡುವ ಶಿಕ್ಷಣ ಕೊಡಿ, ಶಕ್ತಿಯನ್ನು ಕೊಡಿ, ಅವರ ಬಲಹೀನತೆಗಳನ್ನು ನೋಡಬೇಡಿರಿ. ಅವರಲ್ಲಿ ಯಾವ ವಿಶೇಷತೆ ಅಥವಾ ಯಾವ ಶಕ್ತಿ ಲೋಪವಾಗಿದೆಯೋ ಅದನ್ನು ತುಂಬುತ್ತಾ ಹೋಗಿ. ಹಿಂದಿನ ದಿನಗಳಲ್ಲಿ ನಿಮಿತ್ತವಾದ ಆತ್ಮರು ಈ ಪಾಲನೆಗೆ ನಿಮಿತ್ತವಾಗುವ ಅವಶ್ಯಕತೆ ಇದೆ. ಜಿಜ್ಞಾಸುಗಳು ಹೆಚ್ಚುವುದು, ಸೇವಾ ಕೇಂದ್ರಗಳು ಹೆಚ್ಚುವುದು, ಇದು ಸಾಧಾರಣವಾದ ವಿಷಯವೇ ಆದರೆ ಪ್ರತಿಯೊಂದು ಆತ್ಮನನ್ನು ತಂದೆಯ ಸಹಾಯದಿಂದ ಶಕ್ತಿಶಾಲಿಯಾಗಿ ತಯಾರು ಮಾಡಬೇಕು. ಈಗ ಇದು ಅವಶ್ಯಕವಾಗಿದೆ. ಸೇವೆಯನ್ನಂತೂ ಎಲ್ಲರೂ ಮಾಡುತ್ತಿದ್ದಾರೆ. ಸೇವೆ ಮಾಡದೇ ಇರಲಾಗುತ್ತಿಲ್ಲ. ಆದರೆ ಸೇವೆಯಲ್ಲಿ ಶಕ್ತಿ ರೂಪದ ತರಂಗಗಳು ಆತ್ಮರಿಗೆ ಅನುಭವವಾಗಬೇಕು. ಶಕ್ತಿಶಾಲಿ ಸೇವೆಯನ್ನು ಮಾಡಬೇಕು. ಸಾಧಾರಣ ಸೇವೆಯಂತು ಈ ದಿನಗಳಲ್ಲಿ ಪ್ರಪಂಚದಲ್ಲಿ ಬಹಳಷ್ಟು ಜನ ಮಾಡುತ್ತಿದ್ದಾರೆ. ಆದರೆ ನಿಮ್ಮ ವಿಶೇಷತೆ ಶಕ್ತಿಶಾಲಿ ಸೇವೆಯನ್ನು ಮಾಡಬೇಕು. ಬ್ರಾಹ್ಮಣಾತ್ಮರಿಗೂ ಸಹ ಶಕ್ತಿಯ ಪಾಲನೆಯ ಅವಶ್ಯಕತೆ ಇದೆ. ಬಾಪ್‌ದಾದಾರವರ ಎದುರಿಗೆ ದೇಶವಿದೇಶಗಳಲ್ಲಿರುವ ಮಕ್ಕಳು ದೂರ ದೂರವಾಗಿದ್ದರೂ ಸಹ ಸಮ್ಮುಖದಲ್ಲಿಯೇ ಇದ್ದಾರೆ. ಬಾಪ್‌ದಾದಾರವರಿಗೆ ತಿಳಿದಿದೆ ಎಲ್ಲರೂ ಒಂದೇ ಮಾತನ್ನು ಹೇಳುತ್ತಿದ್ದಾರೆ. ನಮ್ಮ ಪ್ರಿಯ ಸ್ಮೃತಿಗಳನ್ನು ತಿಳಿಸಿರಿ, ನಮ್ಮ ಪ್ರಿಯ ಸ್ಮೃತಿಗಳನ್ನು ತಿಳಿಸಿ ಎಂದು. ಬಾಪ್‌ದಾದಾರವರ ಹತ್ತಿರ ಎಲ್ಲರ ಪ್ರಿಯ ಸ್ಮೃತಿಗಳು ತಲುಪುತ್ತವೆ. ಪತ್ರಗಳಿಂದ, ಬಾಯಿಂದ, ಕಾರ್ಡುಗಳಿಂದ ಈ ದಿನಗಳಲ್ಲಿ ಅಂತೂ ಇಮೇಲ್ಸಿಂದ ಸಹ ಕಳುಹಿಸುತ್ತಾರೆ.  ವಿಜ್ಞಾನ ಸಾಧನೆಗಳು ಬಹಳ ಬಂದು ಬಿಟ್ಟಿವೆ. ಬಾಪ್‌ದಾದಾರವರ ಹತ್ತಿರ ಸಾದಾನಗಳಿಂದಲೂ ಸ್ಮೃತಿ ತಲುಪುತ್ತದೆ ಮತ್ತು ಮನಸ್ಸಿನ ಧ್ವನಿಯಿಂದಲೂ ಸಹ ಸ್ಮೃತಿ ತಲುಪುತ್ತದೆ. ಆದರೆ ಮನಸ್ಸಿನ ಧ್ವನಿ ವೇಗವಾಗಿ ತಲುಪುತ್ತದೆ. ಆದ್ದರಿಂದ ಇಂದು

ಯಾರಾದರೆ ಮನಸ್ಸಿನಿಂದ, ಸಾಧನಗಳಿಂದ ಸ್ಮೃತಿಯನ್ನು ಕಳುಹಿಸಿದ್ದೀರೋ ಅವರೆಲ್ಲರಿಗೂ ಬಾಪ್‌ದಾದಾ ಪ್ರೀತಿಯ ಸ್ಮೃತಿಯನ್ನು ಕೊಡುತ್ತಿದ್ದಾರೆ. ಅದಕ್ಕೆ ಪ್ರತ್ಯುತ್ತರವಾಗಿ ತಂದೆಯು ಪದಮಾ ಪದಂ ಪ್ರೀತಿಯ ಸ್ಮೃತಿಗಳನ್ನು ಕೊಡುತ್ತಿದ್ದಾರೆ.

**ನಾಲ್ಕೂ ಕಡೆ ಹೃದಯದಿಂದ ಸಮೀಪವಿರುವ ಸಮರ್ಥ ಆತ್ಮರಿಗೆ, ಸದಾ ಸಮಯಾನುಸಾರ ಪ್ರತಿಯೊಂದು ಶಕ್ತಿಯನ್ನು ಸ್ವರೂಪದಿಂದ ಪ್ರತ್ಯಕ್ಷ ಮಾಡುವ ಶ್ರೇಷ್ಠಾತ್ಮರಿಗೆ, ಸದಾ ಶಕ್ತಿಗಳಿಂದ ಆತ್ಮರ ಪಾಲನೆಗೆ ನಿಮಿತ್ತವಾದ ತಂದೆಗೆ ಸಹಯೋಗಿಯಾದ ಆತ್ಮರಿಗೆ, ಸದಾ ಪ್ರತಿಯೊಬ್ಬರಿಗೆ ಧೈರ್ಯ, ಉತ್ಸಾಹ ಮತ್ತು ಉಲ್ಲಾಸವನ್ನು ಕೊಟ್ಟು ಹಾರುವ ಕಲೆಯಲ್ಲಿ ಹಾರುವವರಿಗೆ, ಸದಾ ಸಮಸ್ಯೆಗಳನ್ನು ಸಮಾಧಾನ ರೂಪದಲ್ಲಿ ಪರಿವರ್ತನೆ ಮಾಡಿಕೊಳ್ಳುವ ವಿಶ್ವ ಪರಿವರ್ತಕ ಆತ್ಮರಿಗೆ, ಸ್ಮೃತಿ ಸ್ವರೂಪದಿಂದ ಸಮರ್ಥ ಸ್ವರೂಪವಾಗುವ ಆತ್ಮರಿಗೆ, ಬಾಪ್‌ದಾದಾರವರ ಪದಮಾಪದಮ್ ಪ್ರಿಯಸ್ಮೃತಿಗಳು ಮತ್ತು ನಮಸ್ತೆ.**

ರಿವೈಸ್ ಕೋರ್ಸ್ 18-01-2001.
***ಯಥಾರ್ತ ಸ್ಮೃತಿಯ ಮೂಲಕ ಸಮರ್ಥ ಸ್ವರೂಪವಾಗಿ ಶಕ್ತಿಗಳಿಂದ ಸರ್ವರ ಪಾಲನೆಯನ್ನು ಮಾಡಿರಿ.***

ಓ ಮಾಸ್ಟರ್ ಸರ್ವಶಕ್ತಿವಂತರೇ! ಪ್ರಕೃತಿ, ಮಾಯೆ, ಸ್ವಭಾವ ಸಂಸ್ಕಾರಗಳು ಮತ್ತು ವಾಯುಮಂಡಲದ ಮೂಲಕ ಬರುವ ಪ್ರತಿಯೊಂದು ಪರಿಸ್ಥಿತಿಯನ್ನು ಸರ್ವಶಕ್ತಿಗಳಿಂದ ಎದುರಿಸಲಾಗುತ್ತಿದೆಯೇ? ಪ್ರಕೃತಿ, ಮಾಯೆ, ಸಂಸ್ಕಾರಗಳು, ವಾಯುಮಂಡಲ ಮತ್ತು ಸಾಂಗತ್ಯ ದೋಷ ಈ ಐದು ವಿಷಯಗಳನ್ನು ನಿಮ್ಮ ಶಕ್ತಿಯಿಂದ ಅಧೀನ ಮಾಡಿಕೊಳ್ಳುತ್ತಿದ್ದೀರಾ? ಈ 5 ಸರ್ಪಗಳನ್ನು ನಿಮ್ಮ ಕಂಠದಲ್ಲಿ ಹಾರವನ್ನಾಗಿ ಮಾಡಿಕೊಂಡಿದ್ದೀರಾ? ನಿಮ್ಮ ಅಂತಿಮ ಮಹಾದೇವ್, ತಪಸ್ವಿದೇವ್, ಅಶರೀರಿ ಸ್ಥಿತಿ ಇರುವ ದೇವಾತ್ಮರ, ಫರಿಶ್ತಾ ಆತ್ಮರ ಸ್ಮೃತಿ ಚಿಹ್ನೆಯಾಗಿ ಈ ಸರ್ಪಗಳು ಕಂಠ ಹಾರವಾಗಿರುವಂತೆ ತೋರಿಸಿದ್ದಾರೆ. ಎಂದು ತಿಳಿಸುತ್ತಾ ಲವಲೀನವಾಗಿರುವ ಮಕ್ಕಳೊಂದಿಗೆ ಬಾಪ್‌ದಾದಾ ವಾರ್ತಾಲಾಪಿಸುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**
ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸಮರ್ಥ ಸ್ವರೂಪದ ವರದಾನದಿಂದ ಸಾಕಾರ ಪ್ರಪಂಚದಲ್ಲಿ ಸೇವೆಗೆ ನಿಮಿತ್ತವಾಗಿ ತಂದೆಗೆ ಸಹಯೋಗಿಯಾಗಿ ತಂದೆಯನ್ನು ಪ್ರತ್ಯಕ್ಷ ಮಾಡುತ್ತಿದ್ದೇನೆ.

2. ನಾನು ಸ್ಮೃತಿ ಮತ್ತು ಸೇವೆಯಲ್ಲಿ ಮಗ್ನವಾಗಿದ್ದೇನೆ.

3. ನಾನು ಯಥಾರ್ಥ ಸ್ಮೃತಿಯಿಂದ ಸಮರ್ಥವಾಗಿದ್ದೇನೆ.

4. "ನಾನು ತಂದೆಯವನು, ತಂದೆ ನನ್ನವರು, ನಾನು ಆತ್ಮ ತಂದೆಯ ಮಗುವಾಗಿದ್ದೇನೆ" ಎಂಬ ಒಂದು ಕ್ಷಣದ ಸ್ಮೃತಿಯಿಂದ ಜನ್ಮ ಸಿದ್ಧ ಅಧಿಕಾರಕ್ಕೆ, ಸರ್ವ ಶಕ್ತಿಗಳಿಗೆ, ವಾರಸತ್ವಕ್ಕೆ ಅಧಿಕಾರಿಯಾಗಿದ್ದೇನೆ.

5. ನಾನು ಸರ್ವಶಕ್ತಿಗಳನ್ನು ತಂದೆಯಿಂದ ವಾರಸತ್ವವಾಗಿ ಪಡೆದಿರುವ ಮಾಸ್ಟರ್ ಸರ್ವಶಕ್ತಿವಂತನು.

6. ನಾನು ಸರ್ವ ಶಕ್ತಿಗಳಿಂದ ಪ್ರಕೃತಿ, ಮಾಯೆ, ಸಂಸ್ಕಾರಗಳು, ವಾಯುಮಂಡಲ ಮತ್ತು ಸಾಂಗತ್ಯ ದೋಷವೆಂಬ 5 ಮುಖಗಳ ಸರ್ಪದ ಮೇಲೆ ಅಧಿಕಾರಿಯಾಗಿ ನೃತ್ಯ ಮಾಡಿ ಸರ್ಪಗಳನ್ನು ನನ್ನ ಕೊರಳಲ್ಲಿ ಹಾರವಾಗಿ, ಶಯನ ಶೈಯ್ಯೆಯಾಗಿ ಮಾಡಿಕೊಂಡು ವಿಜಯೀಮಾಲೆಯ ಸಮೀಪದ ಮಣಿಯಾಗಿದ್ದೇನೆ.

7. ನಾನು ನನ್ನ ಸಮರ್ಥ ಸ್ವರೂಪದಲ್ಲಿ, ಪ್ರತಿಯೊಂದು ಕಾರ್ಯದಲ್ಲಿ, ಪ್ರತಿಯೊಂದು ಶಕ್ತಿಯನ್ನು ಪ್ರತ್ಯಕ್ಷ ರೂಪದಲ್ಲಿ ತಂದು ವಿಜಯಿಯಾಗಿ, ವಿಜಯೀ ಮಾಲೆಯ ಮಣಿಯಾಗಿದ್ದೇನೆ ಮತ್ತು ನನ್ನ ನಯನಗಳಿಂದ, ಪ್ರತಿಯೊಂದು ಮಾತಿನಿಂದ, ಇತರರಿಗೂ ಸಹ ಸಮರ್ಥತೆಯ ಅನುಭವವಾಗಿದೆ.

8. ನಾನು ಮನಸ್ಸು, ಬುದ್ಧಿಯಿಂದ ಶ್ರೇಷ್ಠ ಸಂಕಲ್ಪ ಮತ್ತು ಯಥಾರ್ಥ ನಿರ್ಣಯ ಶಕ್ತಿಯ ವಾಯುಮಂಡಲವನ್ನು ಸ್ವರೂಪದಲ್ಲಿ ತರುವ ಶಕ್ತಿ ಸ್ವರೂಪ.

9. ನಾನು ಸಾಧಾರಣ ನಡವಳಿಕೆಯಿಂದ ಸ್ವಯಂಗೆ ಮತ್ತು ಇತರರಿಗೆ ಡಬಲ್ ಲೈಟ್ ಫರಿಶ್ತಾನ ಹಾಗೆ ಅನುಭವವಾಗಿದ್ದೇನೆ.

10. ಪ್ರಕೃತಿ, ಮಾಯೆ, ಸ್ವಭಾವ ಸಂಸ್ಕಾರಗಳು, ವಾಯುಮಂಡಲದ ಪರಿಸ್ಥಿತಿಗಳಲ್ಲಿ ನಾನು ಮಾಸ್ಟರ್ ಸರ್ವ ಶಕ್ತಿವಂತನು.

11. ನಾನು ಸದಾ ಸರ್ವ ಶಕ್ತಿಗಳಿಂದ ಜೀವಿಸುತ್ತಾ , ಹಾರುತ್ತಾ ಇದ್ದೇನೆ.

12. ನಾನು ಆತ್ಮರಿಗೆ ದೃಷ್ಟಿಯಿಂದ, ಮಾತಿನಿಂದ, ಕರ್ಮದಿಂದ ಸಂಬಂಧ ಸಂಪರ್ಕದಿಂದ, ಸಮರ್ಥವಾಗುವ ಸಹಯೋಗವನ್ನು, ಸಮರ್ಥ ಸ್ವರೂಪದ ಸ್ನೇಹವನ್ನು ಕೊಡುವ ಸಮರ್ಥ ಸ್ವರೂಪ.

13. ನಾನು ಇತರರಿಗೆ ಶಕ್ತಿಯ ಸಹಯೋಗವನ್ನು ಕೊಡುತ್ತಾ ಶಕ್ತಿಗಳಿಂದ ಪಾಲನೆ ಮಾಡುವ ಶಕ್ತಿ ಸ್ವರೂಪ.

14. ನಾನು ಪ್ರತಿಯೊಂದು ಆತ್ಮನನ್ನು ತಂದೆಯ ಸಹಾಯದಿಂದ ಶಕ್ತಿಶಾಲಿಯನ್ನಾಗಿ ತಯಾರು ಮಾಡಿ ಶಕ್ತಿಶಾಲಿ ಸೇವೆಯನ್ನು ಮಾಡುತ್ತಿದ್ದೇನೆ.